## ಷರತ್ತುಗಳು:- KW-1 & KW-2 (SC/ST/Others, Reserved Works )
## (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೇ ಮೀಸಲಿಟ್ಟ ಕಾಮಗಾರಿಗಳಿಗೆ )

1 ಎಲ್-1 ಅರ್ಹ ಗುತ್ತಿಗೆದಾರರು ಯಾವುದೇ ಕಾರಣ ನೀಡಿ ಕಾಮಗಾರಿಯ ಕರಾರು ಒಪ್ಪಂದ ಮಾಡಿಕೊಳ್ಳದಿದ್ದರೆ, ಕಾಮಗಾರಿಗೆ ಸಲ್ಲಿಸಿದ ಈಡಿಗಂಟು (ಇ.ಎಂ.ಡಿ.) ಮೊತ್ತವನ್ನು ಮುಟ್ಟುಗೋಲುಹಾಕಿಕೊಂಡು ಮರು ಟೆಂಡರ್ ಕರೆಯಲಾಗುವುದು.

2 ಕಾಮಗಾರಿಯ ಟೆಂಡರಿಗಿಟ್ಟ ಮೊತ್ತದ ಶೇಕಡಾ 25%ರಷ್ಟು ಮೊತ್ತದ ಯಾವುದೇ ಮಾದರಿ ಕಾಮಗಾರಿಯನ್ನು 12 ತಿಂಗಳಿನ ಒಳಗಡೆ ಹಿಂದಿನ 5 ವರ್ಷಗಳಲ್ಲಿ ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ಅರ್ಜಿ ಜೊತೆಗೆ ಕಾಮಗಾರಿ ಪೂರ್ಣಗೊಳಿಸಿರುವ ಪ್ರಮಾಣ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಅಂತರಜಾಲದಲ್ಲಿ ಅಳವಡಿಸಬೇಕು ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW_1 & KW_2 ಅಡಿಯ ಎಲ್ಲಾ ನಿಯಮಗಳು ಅನ್ವಯಿಸುತ್ತವೆ.

3 ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೇ ಮೀಸಲಿಟ್ಟ ಗುತ್ತಿಗೆದಾರರಾಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಹಾಗೂ ಕರ್ನಾಟಕ ರಾಜ್ಯದಲ್ಲಿ 10 ವರ್ಷಗಳಿಗೂ ಹೆಚ್ಚು ಕಾಲ ವಾಸಿಸಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅಂತರ್ಜಾಲದಲ್ಲಿ ಸ್ಕ್ಯಾನ್ ಮಾಡಿ ಸಲ್ಲಿಸುವುದು

4 ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೇ ಮೀಸಲಿಟ್ಟ ಗುತ್ತಿಗೆದಾರರು ಸಂಸ್ಥೆ / ಕಂಪನಿಯಾಗಿದ್ದಲ್ಲಿ ಈ ಸಂಸ್ಥೆಯ ಎಲ್ಲಾ ಸದಸ್ಯರುಗಳು ಎಸ್.ಸಿ. / ಎಸ್.ಟಿ ಮತ್ತು ಇತರೇ ಮೀಸಲಿಟ್ಟ ಸಮುದಾಯಕ್ಕೆ ಸೇರಿದವರಾಗಿರಬೇಕು.

5 ಕೆಟಿಪಿಪಿ ಆಕ್ಟ್ ತಿದ್ದುಪಡಿ 2007ಅನುಸಾರ ಎಸ್.ಸಿ.ಎಸ್.ಟಿ ಇತರೇ ಮೀಸಲಿಟ್ಟ ಗುತ್ತಿಗೆದಾರರಿಗೆ ಮೀಸಲಿರಿಸಲಾದ ಕಾಮಗಾರಿಗಳನ್ನು ಕಾಲಕಾಲಕ್ಕೆ ಆರ್ಥಿಕ ಇಲಾಖೆಯಿಂದ ಮತ್ತು ಲೋಕೋಪಯೋಗಿ ಇಲಾಖೆಯಿಂದ ಹೊರಡಿಸಲಾಗುವ ಆದೇಶ, ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳ ಅನುಸಾರ ಕಟ್ಟುನಿಟ್ಟಾಗಿ ಪಾಲಿಸಬೇಕು.

6 ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅವಧಿಯಲ್ಲಿರುವ ಗುತ್ತಿಗೆ ನೊಂದಣೆ ಪ್ರತಿಯನ್ನು ಅಂತರ್ಜಾಲದಲ್ಲಿ ಸ್ಕ್ಯಾನ್ ಮಾಡಿ ಸಲ್ಲಿಸಬೇಕು.

7 ಟೆಂಡರ್ ಕೆಪ್ಯಾಸಿಟಿಯನ್ನು ಲೆಕ್ಕಹಾಕಲು ಅವಶ್ಯವಿರುವ ದಾಖಲಾತಿಯಾದ ಈ ಹಿಂದಿನ ಐದು ವರ್ಷಗಳ ವಾರ್ಷಿಕ ವಹಿವಾಟು ಮಾಡಿರುವ ಯಾವುದೇ ಒಂದು ವರ್ಷದ ಹೆಚ್ಚಿನ ವಹಿವಾಟನ್ನು ಪರಿಗಣಿಸಿ ಟೆಂಡರ್ ಕೆಪ್ಯಾಸಿಟಿಗಾಗಿ ಲೆಕ್ಕ ಹಾಕಲಾಗುವುದು, ಚಾರ್ಟೆಡ್ ಅಕೌಂಟೆಂಟ್‌ರ್ **(Charted Accountant)** ಇವರಿಂದ ಪಡೆದ ಪ್ರಮಾಣಿಕರಿಸಿದ ಪತ್ರ ಸ್ಕ್ಯಾನ್ ಮಾಡಿ ಅಂತರ್ಜಾಲದಲ್ಲಿ ಅಳವಡಿಸತಕ್ಕದ್ದು.

8 ಕಾಮಗಾರಿಗೆ ನೀಡಿದ ಈಡಿಗಂಟು **(E.M.D.)**ಮೊತ್ತವನ್ನು ಅರ್ಹರಾದ ಗುತ್ತಿಗೆದಾರೊಂದಿಗೆ ಒಪ್ಪಂದ ಮಾಡಿಕೊಂಡ ನಂತರ ಮರಳಿಸಲಾಗುವುದು.

9 ಗುತ್ತಿಗೆದಾರರು ಈ ಕಛೇರಿಯಲ್ಲಿ ಕಾಮಗಾರಿಯನ್ನು ನಿರ್ವಹಿಸುವಾಗ ನಿಗಧಿತ ಗುತ್ತಿಗೆ ಅವಧಿಯೊಳಗೆ ಸಂಪೂರ್ಣಗೊಳಿಸದೇ ಅನಾವಶ್ಯಕವಾಗಿ ಕಾಲಹರಣ **(Lingering)** ಮಾಡಿದ್ದು ಕಂಡು ಬಂದಲ್ಲಿ ಕಾಮಗಾರಿಯ ಅರ್ಹತೆಯನ್ನು ಪರಿಗಣಿಸಲಾಗುವುದಿಲ್ಲಾ ಹಾಗೂ ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸುವಲ್ಲಿ ಉತ್ತಮ ಪ್ರದರ್ಶನಗಳ **(Performance)**ಇದ್ದಲ್ಲಿ ಅರ್ಹತೆಗಾಗಿ ಪರಿಗಣಿಸಲಾಗುವುದು.

10 ಗುತ್ತಿಗೆದಾರರು ಕಾಮಗಾರಿಯನ್ನು ನಿಗಧಿಪಡಿಸಿದ ಯಂತ್ರೋಪಕರಣಗಳು ಹಾಗೂ ಸಾಮಗ್ರಿಗಳನ್ನು ಸ್ವತ: ಸಂಗ್ರಹಿಸಿ ಕೆಲಸಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ತಂದು ಸ್ಥಳದಲ್ಲಿ ಕೆಲಸ ನಿರ್ವಹಿಸುವುದು. ಇಲಾಖಾವತಿಯಿಂದ ಯಾವುದೇ ರೀತಿ ಸಲಕರಣೆ ಹಾಗೂ ಸಾಮಗ್ರಿಗಳನ್ನು ಪೂರೈಸಲಾಗುವುದಿಲ್ಲ, ಕೆಲಸ ಪ್ರಾರಂಭಿಸುವ ಪೂರ್ವದಲ್ಲಿ ಕಾಮಗಾರಿಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಇಲಾಖೆ ಸೂಚಿಸಿದ ಪರೀಕ್ಷಣಾ ಕೇಂದ್ರಲ್ಲಿ ತಮ್ಮ ಸ್ವತ: ಖರ್ಚಿನಲ್ಲಿ ಪರೀಕ್ಷಸಿಕೊಂಡು ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದುಕೊಂಡು ಸಾಮಗ್ರಿಗಳನ್ನು ಕೆಲಸಕ್ಕೆ ಉಪಯೋಗಿಸಬೇಕಾಗುತ್ತದೆ ಹಾಗೂ ಕಾಮಗಾರಿಯನ್ನು ಸಂಪೂರ್ಣಗೊಳಿಸುವ ಕಾರ್ಯಕ್ರಮದ ಪಟ್ಟಿ ಬಾರ್‌ಚಾರ್ಟನ್ನು ನಿಗಧಿತ ಟೆಂಡರ್ ಅವಧಿಯಲ್ಲಿ ಸಿದ್ದಪಡಿಸಿ ಒಪ್ಪಂದ ಸಮಯದಲ್ಲಿ ಸಹಿಯೊಂದಿಗೆ ನೀಡುವುದು.

11 ಗುತ್ತಿಗೆ ಮೊತ್ತದ ಶೇಕಡಾ (ಸುರಕ್ಷತಾ ಠೇವಣಿ**(Security Deposit**)ಯನ್ನು ಸಲ್ಲಿಕೆಯಾದ ಬಿಲ್ಲಿನ ಮೊತ್ತಕ್ಕೆ ಶೇಕಡಾ 5%ರಷ್ಟು ಕಟಾವು ಮಾಡಲಾಗುವುದು.)

12 ಟೆಂಡರ್ ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೆ ಮರಳಿಸಲಾಗುವುದಿಲ್ಲ.

13 ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಮೂರನೇ ತಂಡದವರಿಂದ ಕಾಲಕಾಲಕ್ಕೆ ಮೇಲ್ವಿಚಾರಣೆಗೆ ಒಳಪಡಿಸಿದ ವರದಿಯಂತೆ ಬಿಲ್ಲುಗಳನ್ನು ಪಾವತಿಸಲಾಗುವುದು.

14 ಅಪೂರ್ಣವಾಗಿ ನೀಡಿದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

15 ಮೇಲೆ ನಮೂದಿಸಿದ ದಿನಾಂಕಗಳು ಸಾರ್ವತ್ರಿಕ ರಜಾ ದಿವಸ ಎಂದು ಘೋಷಿಸಿದ್ದಲ್ಲಿ ಮುಂದಿನ ಕೆಲಸದ ದಿವಸವನ್ನು ಪರಿಗಣಿಸಲಾಗುವುದು.

16 ಯಾವುದೇ ಅಥವಾ ಎಲ್ಲ ಟೆಂಡರ್‌ಗಳನ್ನು ಯಾವುದೇ ಹಂತದಲ್ಲಿ ಯಾವುದೇ ಕಾರಣವಿಲ್ಲದೆ ನಿರಾಕರಿಸುವ / ರದ್ದುಗೊಳಿಸುವ ಹಕ್ಕನ್ನು ಟೆಂಡರ್‌ಗಳನ್ನು ನಿರ್ಧರಿಸುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿದ್ದಾರೆ.

17 ಕಾಮಗಾರಿಯು ಸಂಪೂರ್ಣಗೊಂಡ ನಂತರ ಸಂಬಂಧಿಸಿದ ಇಲಾಖೆಗೆ ಹಸ್ತಾಂತರಿಸಿದ ಪ್ರತಿಯನ್ನು ಅಂತಿಮ ಬಿಲ್ಲಿನೊಂದಿಗೆ ಸಲ್ಲಿಸುವುದು.

18 ಯಾವುದೇ ಕಾರಣದಿಂದ ಟೆಂಡರ್ ಪ್ರಕ್ರಿಯೆಯು ಮುಂದೂಡಲ್ಪಟ್ಟಲ್ಲಿ, ಮುಂದೂಡಿದ ದಿನಾಂಕವನ್ನು ವೆಬ್ ಸೈಟ್ https://kppp.karnataka.gov.in/ಯಲ್ಲಿ ಪ್ರಕಟಿಸಲಾಗುವುದು. ಗುತ್ತಿಗೆದಾರರು ಈ ವಿಭಾಗ ಕಛೇರಿಯಲ್ಲಿ ಸಂಪರ್ಕಿಸಿ ಮುಂದೂಡಿದ ದಿನಾಂಕಗಳನ್ನು ಪಡೆದುಕೊಳ್ಳಬಹುದು.

19 ಹೆಚ್ಚಿನ ಮಾಹಿತಿಯು ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸ ವೇಳೆಯಲ್ಲಿ ಅಥವಾ https://kppp.karnataka.gov.in/ ಈ ವೆಬ್ ಸೈಟ್ ವಿವರಗಳನ್ನು ಪಡೆಯಬಹುದು.

**20** **ಗುತ್ತಿಗೆದಾರರು ಟೆಂಡರ್ ಸಲ್ಲಿಸುವ ಸಮಯದಲ್ಲಿ ಸುಳ್ಳು ದಾಖಲೆಗಳನ್ನು (False Documents) ಸಲ್ಲಿಸಿದ್ದಲ್ಲಿ ಅದಕ್ಕೆ ನೀವೆ ಜವಾಬ್ದಾರರಾಗಿರುತ್ತಿರಿ ಮತ್ತು ನಿಮ್ಮ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.**

**ಶ್ರೀ ಗಿರೀಶ್ ಕುಮಾರ್ ಗುಡ್ಡಾ**
ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್
ವಿಭಾಗ, ಯಾದಗಿರ.